ಹಟಾತ್ತನೆ ಸುಮಾರು ಹತ್ತಾರು ಎಕರೆಗಳ ವಿಸ್ತಾರದ ಹಸಿರು ತುಂಬಿದ ಪ್ರದೇಶದಲ್ಲಿ ಕೃಷಿಭೂಮಿ ಕಂಡಿತು. ಮರಗಳ ನಡುವೆ ಹರಡಿಕೊಂಡಿದ್ದ ಬಾರ್ಲಿ, ಸಾಸಿವೆ ಮುಂತಾದ ಬೆಳೆಗಳು ನೀರಾವರಿಯ ಆಶ್ರಯದಲ್ಲಿ ತಂಪಾಗಿ ಬೆಳೆದು ನಿಂತಿದ್ದವು. ಬೆಟ್ಟಗಳಿಂದ ಹರಿದು ಬರುತ್ತಿದ್ದ ನೀರಿನಿಂದ ಹಲವು ಬೆಳೆಗಳ ಕೃಷಿ ಮಾಡಿರುವುದರ ಜೊತೆಗೆ, ಏಪ್ರಿಕಾಟ್ ಮರಗಳನ್ನೂ ಬೆಳೆಸಿದ್ದರು. ರಸ್ತೆಯ ಬಲಕ್ಕೆ ಒಂದು ಮನೆಯೂ ಇತ್ತು. ಕಾರಿನಿಂದ ಇಳಿದು ಸುತ್ತಲೂ ಕಣ್ಣಾಡಿಸುತ್ತಿದ್ದಂತೆ ಆ ಮನೆಯ ಕಡೆಯಿಂದ ಇಬ್ಬರು ಹೆಣ್ಣುಮಕ್ಕಳು, ನಮ್ಮನ್ನೆ ನೋಡಿ ನಗುತ್ತ ಎದುರಿಗೆ ಬಂದರು. ಅವರನ್ನು ಕಂಡದ್ದೆ ನನ್ನಲ್ಲಿ ಪುಳಕ ಹರಿಯಿತು. 'ಆರ್ಯ ರಕ್ತ'ವು ಮಾಂಸಮೂಳೆಗಳ ಎರಡು ಹೆಣ್ಣುಮಕ್ಕಳ ರೂಪದಲ್ಲಿ ನಮ್ಮ ಮುಂದೆ ನಗುತ್ತ ನಿಂತಿರುವುದು ನಿಜವೆ? ಎಂಬ ಪ್ರಶ್ನೆ ನನ್ನನ್ನು ಕಾಡತೊಡಗಿತು. ತಕ್ಷಣ ವೀಣಾಳ ಕ್ಯಾಮೆರ ತನ್ನ ಕೆಲಸ ಪ್ರಾರಂಭಿಸಿತು. ಹೊಳೆಯುತ್ತಿದ್ದ ನೀಲಿ ಕಣ್ಣುಗಳು, ಹಾಲುಬಿಳುಪಿನ ಮೈ ಬಣ್ಣ, ಚೆಲುವು ಚಿಮ್ಮುತ್ತಿದ್ದ ಕೆನ್ನೆಗಳು, ಅಷ್ಟಾಗಿ ಕಪ್ಪಲ್ಲದ, ಕೆಂದು ಬಣ್ಣ ಸವರಿದಂತಿದ್ದ ಕೂದಲು, ಆದರೆ ನಾನು ಊಹಿಸಿದಕ್ಕಿಂತ ಕುಳ್ಳಗಿದ್ದರೂ ಪುಷ್ಟವಾಗಿ ಬೆಳೆದಿದ್ದ ಆ ಹೆಣ್ಣು ಮಕ್ಕಳ ಮುಖದಲ್ಲಿ ಆರ್ಯರ ಗುಣಗಳನ್ನು ಹೇಗೆ ಹುಡುಕುವುದು ಎಂದು ಯೋಚಿಸುತ್ತ ನಿಂತೆ. ಕಾಶ್ಮೀರದ ಅಥವಾ ಮಧ್ಯ ಏಷ್ಯಾದವರ ಸ್ವಾಭಾವಿಕ ಚೆಲುವಿನ ಜೊತೆಗೆ ಟಿಬೆಟ್‌ನ ಮುಖಚರ್ಯೆಗಳ ಮಿಶ್ರಣ ಅವರಿಬ್ಬರಲ್ಲಿ ಕಂಡಿತೇ ವಿನಃ ಮತ್ಯಾವುದೇ 'ಆರ್ಯ' ವಿಶೇಷತೆ ನನಗೆ ಕಾಣಲಿಲ್ಲ. ಆಗಲೆ ವೀಣಾ ಅವರೊಂದಿಗೆ ಸಂಭಾಷಣೆಗೆ ತೊಡಗಿದ್ದಳು. ಆದರೆ ಯಾವ ಭಾಷೆಯಲ್ಲಿ?

ಇಬ್ಬರಿಗೂ ಮತ್ತೊಬ್ಬರ ಭಾಷೆ ಅರ್ಥವಾಗದು. ವೀಣಾ ನನ್ನತ್ತ ತಿರುಗಿ ಇವರು ಆರ್ಯರಾದರೆ ಸಂಸ್ಕೃತ ಗೊತ್ತಿರಬೇಕಲ್ಲ ಎಂದು ತನಗೆ ತಿಳಿದಿದ್ದ ಒಡಕು ಸಂಸ್ಕೃತದಲ್ಲಿ 'ಭವತ್ಯಾಹ ನಾಮ ಕಿಮ್?' ಎಂದು ಮುಷ್ಟಿಯನ್ನು ಮೇಲೆ ಕೆಳಗೆ ಆಡಿಸಿ ಕೇಳಿದಳು. ಆ ಇಬ್ಬರೂ ಹೆಣ್ಣುಮಕ್ಕಳು ನಗತೊಡಗಿದರಷ್ಟೆ ಹೊರತು ಉತ್ತರಿಸಲಿಲ್ಲ. ವಿಧಿಯಿಲ್ಲದೆ ನಾವು ಸಂಜ್ಞೆಗಳಲ್ಲಿ ಮಾತನಾಡುತ್ತಿದ್ದಂತೆ ನಮ್ಮ ಚಾಲಕ ಸಹಾಯಕ್ಕೆ ಬಂದ. ಅವರ ಜೊತೆ ಹರುಕು ಮುರುಕು ಟಿಬೆಟಿ ಭಾಷೆಯಲ್ಲಿ ಅಲ್ಪ ಸ್ವಲ್ಪ ಸಂವಹಿಸತೊಡಗಿದ. ಅಷ್ಟರಲ್ಲಿ ಹತ್ತಿರದಲ್ಲಿದ್ದ ಮನೆಯಿಂದ ಮತ್ತೊಬ್ಬ ವ್ಯಕ್ತಿ ಹೊರಬಂದ. ಸುಮಾರು 40 ವರ್ಷದ, ಸಣ್ಣಗೆ ಉದ್ದಕ್ಕಿದ್ದ ಆತನ ಕಣ್ಣಾಲಿಗಳೂ ಸಹ ನೀಲಿಯ ಗೋಲಿಗಳಂತೆ ಕಂಡವು. ಅದೇ ಹಾಲುಬಿಳುಪಿನ ಮೈಬಣ್ಣ. ಆಕರ್ಷಕ ಚೆಲುವು ಸೂಸುವ ಮುಖದಲ್ಲಿ ಮುಗ್ಧನಗು.

ಸ್ವಲ್ಪ ಸಮಯದ ನಂತರ ತಿಳಿದದ್ದು ಅಲ್ಲಿನ ಜನರಿಗೆ ತಮ್ಮನ್ನು ಆರ್ಯರು ಎಂದು ಹೊರಗಿನವರು ಗುರುತಿಸುತ್ತಿದ್ದಾರೆ ಎಂಬ ಬಗ್ಗೆ ಅಷ್ಟಾಗಿ ತಿಳಿಯದು ಎಂಬ ಸತ್ಯ! ಅಷ್ಟಕ್ಕೂ 'ಆರ್ಯರು' ತಮ್ಮನ್ನು ತಾವು ಆರ್ಯ ಜನಾಂಗವೆಂದು ಗುರುತಿಸಿಕೊಂಡಿರಲಿಲ್ಲ. ವೇದಕಾಲದ ಜನಾಂಗಕ್ಕೆ 'ಆರ್ಯರು' ಎಂದು ನಾಮಕರಣ ಮಾಡಿದ್ದೆ ಭಾರತಕ್ಕೆ ಬಂದ ಯುರೋಪಿನ ಚರಿತ್ರಕಾರರು. ಹಾಗಾಗಿ ಇಲ್ಲಿನ ಕಣಿವೆಯ ಜನ ಒಂದು ವೇಳೆ ಆರ್ಯರೇ ಆಗಿದ್ದರೂ ಅವರಿಗೆ ಅದು ತಿಳಿಯುವ ಸಾಧ್ಯತೆ ಇಲ್ಲ! ಒಂದು ವೇಳೆ ತಿಳಿದಿದ್ದರೆ, ಅದು ಹೊರಗಿನಿಂದ ಬಂದ ನಮ್ಮಂತಹ ಪ್ರವಾಸಿಗರಿಂದಲೆ ಇರಬೇಕು ಎಂದುಕೊಂಡೆವು. ಇನ್ನು ಅಲ್ಲಿನ ಜನರಿಗೆ ತಮ್ಮದೆ ನಂಬಿಕೆಗಳು, ಹಬ್ಬಗಳು, ದೈವಗಳು ಇವೆಯಾದರೂ ಆರ್ಯರೆನ್ನುವ ಗುಂಪಿಗೆ ಸೇರಿರುವುದನ್ನು ಸಾಬೀತುಪಡಿಸುವಂತಹ ಯಾವುದೇ ಕುರುಹು ನಮಗೆ ಕಾಣಲಿಲ್ಲ; ಅವರು ಗೋವುಗಳನ್ನು ಪೂಜಿಸುತ್ತಾರೆ ಎಂಬ ಒಂದು ಗಮನಾರ್ಹ ವಿವರದ ಹೊರತಾಗಿ. ಮಾತಿನ ನಡುವೆ ಅದೇ